ಕಾರವಲ
4. 6. 2018 ಸೋಮವಾರ, ವೃಷಭ 21

# ಸರಕಾರಿ ನೌಕರರ ಅನಾಸ್ಥೆ ವಿರುದ್ಧ ಜನರ ಪ್ರತಿಭಟನೆ

ರಾಜ್ಯದಲ್ಲಿ ಆಡಳಿತ ಉತ್ತಮ ಪಡಿಸಲು ಸರಕಾರ ತೀವ್ರ ಪ್ರಯತ್ನ ನಡೆಸುತ್ತಿರುವಂತೆಯೇ ನಾಡಿನಲ್ಲಿ ಅರಾಜಕತ್ವ ತಲೆಯೆತ್ತುತ್ತಿದೆ. ಇದನ್ನು ಕಂಡು ಸಹಿಸಲಾಗದ ಜನರು ಪ್ರತಿಭಟನೆ ವ್ಯಕ್ತಪಡಿಸುತ್ತಾರೆ.

ಶಾಲೆಗಳು ಈಗಾಗಲೇ ಆರಂಭಗೊಂಡಿದೆ. ಉನ್ನತ ಶಿಕ್ಷಣಕ್ಕೆ ಸಮಯ ಹತ್ತಿರವಾಗುತ್ತಿದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸಂಬಂಧಿಸಿ ಹಲವು ಪ್ರಮಾಣ ಪತ್ರಗಳು ಪಂಚಾಯತ್ ಕಚೇರಿಗಳ ಸಹಿತ ಮತ್ತಿತರ ಸರಕಾರಿ ಕಚೇರಿಗಳಿಂದ ಅಗತ್ಯವಿದೆ.ಇದರ ಹೊರತು ಇತ್ತೀಚೆಗೆ ಸಂಭವಿಸಿದ ಧಾರಾಕಾರ ಮಳೆ, ಸಿಡಿಲಿನಿಂದ ಉಂಟಾದ ನಾಶನಷ್ಟಗಳನ್ನು ಲೆಕ್ಕ ಹಾಕಬೇಕಾದ ಹೊಣೆಗಾರಿಕೆ ಇಂತಹ ಕಚೇರಿಗಳ ನೌಕರರಿಗಿದೆ. ಅಂದರೆ ಜಿಲ್ಲೆಯಲ್ಲಿ ಸರಕಾರಿ ಕಚೇರಿಗಳ ಚಟುವಟಿಕೆ ಕೇವಲ ಹರಕೆ ಸಂದಾಯವಾಗಿ ಬದಲಾಗಿದೆ. ನೌಕರರು ಅವರಿಗೆ ಸೌಕರ್ಯವಿದ್ದಾಗ ಕಚೇರಿಗೆ ಹಾಜರಾಗುವವರು, ಅಗತ್ಯವಿದ್ದಾಗ ಮರಳುವವರು ಕಚೇರಿಯಲ್ಲಿದ್ದಾಗ ಕೆಲಸ ಮಾಡಿದರಾಯಿತು, ಇಲ್ಲದಿದ್ದರೆ ಇಲ್ಲ. ಜನರು ಕಚೇರಿಗಳಿಗೆ ಬಂದಾಗ ವಿವಿಧ ಕಾರಣಗಳನ್ನು ಹೇಳಿ ಅವರನ್ನು ಬರಿಗೈಯಲ್ಲಿ ಮರಳಿಸುತ್ತಾರೆ. ಅನ್ಯದಾರಿಯಿಲ್ಲದ ಜನರು ನಿರಾಸೆಗೊಂಡು ಮರಳುತ್ತಾರೆ. ಇದಾಗಿದೆ ಇದೀಗ ಸರಕಾರಿ ಕಚೇರಿಗಳಲ್ಲಿರುವ ಸ್ಥಿತಿ. ಸ್ಥಿತಿ ಹೀಗಿರುವಾಗ ಕರ್ತವ್ಯಲೋಪವೆಸಗುವ ನೌಕರರ ವಿರುದ್ಧ ಕ್ರಮಕೈಗೊಳ್ಳಬೇಕಾದ ಹಿರಿಯ ಅಧಿಕಾರಿಗಳು ನಿಶ್ಚಿಂತೆಯಲ್ಲಿರುತ್ತಾರೆ. ಕಾನೂನು, ನಿಬಂಧನೆಗಳೆಲ್ಲಾ ಕೇವಲ ಕಡತದಲ್ಲೇ ಉಳಿದುಕೊಂಡಿದೆ. ಅಧಿಕಾರಿಗಳ ಭಾಗದಿಂದಲೂ, ನೌಕರರ ಭಾಗದಿಂದಲೂ ಮುಂದುವರಿಯುತ್ತಿರುವ ಇಂತಹ ನಿರ್ಲಕ್ಷ್ಯ ನೀತಿಯಿಂದ ಜನರು ನಿರಾಸೆಪಡುವಂತಾಗಿದೆ. ಈ ನಿರಾಸೆ ಕೊನೆಗೊಳ್ಳುವುದು ರೋಷ, ಪ್ರತಿಭಟನೆ ಮೂಲಕವಾಗಿದೆ. ಕುಂಬಳೆ ಗ್ರಾಮ ಪಂಚಾಯತ್‌ನಲ್ಲಿ ಇತ್ತೀಚೆಗೆ ಕಂಡು ಬಂದಿರುವುದು ಇದೇ ಆಗಿದೆ. ಪಂಚಾಯತ್‌ನ ಚಟುವಟಿಕೆಗಳಿಗೆ ನೇತೃತ್ವ ಕೊಡಬೇಕಾದ ಪಂಚಾಯತ್ ಅಧ್ಯಕ್ಷ ಹಾಗೂ ಕಾರ್ಯದರ್ಶಿಯ ಕಚೇರಿಗಳು ಇತ್ತೀಚೆಗೆ ತೆರೆದಿರಲಿಲ್ಲ. ಕಾರ್ಯದರ್ಶಿಯ ಅನುಪಸ್ಥಿತಿಯಲ್ಲಿ ಕಚೇರಿ ಚಟುವಟಿಕೆ ನಿಯಂತ್ರಿಸಬೇಕಾದ ಅಸಿಸ್ಟೆಂಟ್ ಸೆಕ್ರೆಟರಿ, ಜ್ಯೂನಿಯರ್ ಸುಪರಿಂಟೆಂಡೆಂಟ್ ಕೂಡಾ ಕಚೇರಿಗೆ ತಲುಪಿರಲಿಲ್ಲ. ಅವರ ಕಚೇರಿಗಳೂ ಮುಚ್ಚಿಕೊಂಡಿತ್ತು. ನೌಕರರಲ್ಲಿ ಕೆಲವರು ಕಚೇರಿಯಲ್ಲಿದ್ದರೂ ಜನರ ಬೇಡಿಕೆಗಳನ್ನು ಈಡೇರಿಸಲಿರುವ ಅಧಿಕಾರ ಅವರಿಗಿಲ್ಲದಿರುವುದರಿಂದ ಕುಂಬಳೆ ಪಂಚಾಯತ್ ಕಚೇರಿ ಕೇವಲ ಪ್ರದರ್ಶನ ವಸ್ತುವಿನಂತಿತ್ತು. ಆದರೆ ಅಂದು ಕಚೇರಿ ಮುಚ್ಚಲಿರುವ ಸಮಯವಾಗುತ್ತಿದ್ದಂತೆ ಓರ್ವ ಓಡಿ ಬಂದು ಹಾಜರಿ ಪುಸ್ತಕದಲ್ಲಿ ಸಹಿ ಹಾಕಲು ಪ್ರಯತ್ನಿಸಿದ್ದಾನೆ. ಅದು ಗಮನಕ್ಕೆ ಬಂದ ಯೂತ್ ಲೀಗ್ ಕಾರ್ಯಕರ್ತರು ತಲುಪಿ ನೌಕರನ ಸಾಹಸಕ್ಕೆ ತಡೆಯೊಡ್ಡಿದ್ದಾರೆ. ಪೊಲೀಸ್ ಠಾಣೆ ಸಮೀಪದಲ್ಲೇ ಪಂಚಾಯತ್ ಕಚೇರಿ ಕಾರ್ಯಾಚರಿಸುತ್ತಿದೆ. ಇದರಿಂದ ಘಟನೆ ಪೊಲೀಸರಿಗೆ ತಿಳಿದು ತಲುಪಿ ಯೂತ್‌ಲೀಗ್ ಕಾರ್ಯ ಕರ್ತರನ್ನು ಬಂಧಿಸಿದ್ದರು. ಇದರಿಂದ ಸಮಸ್ಯೆ ತಾತ್ಕಾಲಿಕವಾಗಿ ಕೊನೆ ಗೊಂಡಿತು. ಆದರೆ ಇವರ ಬಂಧನದಿಂದ ಪಂಚಾಯತ್ ಕಚೇರಿಯಲ್ಲಿನ ಸಮಸ್ಯೆಗಳಿಗೆ ಪರಿಹಾರ ಕಾಣಲು ಸಾಧ್ಯವಿಲ್ಲ. ಕೆಲವು ರಾಜಕೀಯ ಪಕ್ಷಗಳ ಕಾರ್ಯಕರ್ತರು ಹಾಗೂ ಸಾರ್ವಜನಿಕರು ಇದೀಗಲೂ ನಿರಾಸೆಯಿಂದಿದ್ದಾರೆ. ಅತೃಪ್ತಿ ಅವರನ್ನು ಕಾಡುತ್ತಿದೆ. ಎಲ್ಲಾ ಹಕ್ಕುಗಳು, ಅವಕಾಶಗಳ ನಿಷೇಧಿಸಲ್ಪಡುವ ಜನರು ಯಾವುದಕ್ಕೂ ಹಿಂಜರಿಯಬಹುದೆಂದು ಹೇಳಲಾಗದು. ಅಹಿತಕರ ಘಟನೆಗಳೇನಾದರೂ ಸಂಭವಿಸದಂತೆ ತಡೆಯಬೇಕಾದರೆ ಸರಕಾರ ಸರಕಾರಿ ಕಚೇರಿಗಳನ್ನು ಸರಕಾರಿ ಕಚೇರಿಗಳಾಗಿಯೇ ಉಳಿಸಿಕೊಳ್ಳಲು ಪ್ರಯತ್ನಿಸಬೇಕು. ಪಬ್ಲಿಕ್ ರಿಲೇಶನ್ಸ್ ಇಲಾಖೆಗಳ ಮೂಲಕ ಆಕರ್ಷಕ ಜಾಹೀರಾತು ಗಳನ್ನು ತಯಾರಿಸಿ ಪತ್ರಿಕೆಗಳಲ್ಲಿ ಪ್ರಕಟಿಸಿದರೆ ಜನರ ಸಮಸ್ಯೆಗಳು ಪರಿಹಾರವಾಗದು. ಸರಕಾರಿ ಕಚೇರಿಗಳ ಘನತೆ ಉಳಿಸಿಕೊಳ್ಳಲು ಸರಕಾರ ಪ್ರಯತ್ನಿಸದಿದ್ದಲ್ಲಿ ಜನರೇ ಆ ಕಾರ್ಯಕ್ಕೆ ಮುಂದಾಗಲಾರರು ಎನ್ನಲಾಗದು. ಕುಂಬಳೆಯಲ್ಲಿ ಕಂಡು ಬಂದ ಘಟನೆ ಇದೇ ಆಗಿದೆ.

ಅಂತಹ ಘಟನೆಗಳು ಇತರ ಪಂಚಾಯತ್ ಸಹಿತ ಸರಕಾರಿ ಕಚೇರಿಗಳಲ್ಲಿ ಯಾವುದೇ ಸಂದರ್ಭದಲ್ಲಿ ಆವರ್ತಿಸಲು ಸಾಧ್ಯವಿದೆ. ಅದಕ್ಕೆ ಅವಕಾಶವುಂ ಟಾಗದಂತೆ ಸಂಬಂಧಪಟ್ಟವರು ಗಮನಿಸಬೇಕು. ಅಧಿಕಾರ ಸ್ಥಾನಗಳಲ್ಲಿ ಕುಳಿತುಕೊಂಡು ಆಡಂಬರ ಜೀವನ ಸಾಗಿಸುತ್ತಿರುವವರಿಗೆ ಸಾಮಾನ್ಯ ಜನರ ಕಷ್ಟಗಳು ತಿಳಿಯಬೇಕೆಂದೇನಿಲ್ಲ. ಆದರೆ ಜನರ ಬಗ್ಗೆ ಗಮನ ಹರಿಸಿ, ಅವರ ಸಮಸ್ಯೆ ಪರಿಹರಿಸಬೇಕಾದ ಹೊಣೆಗಾರಿಕೆ ಸಂಬಂಧಪಟ್ಟವರಿಗೆ ಇದೆ ಎಂಬುದನ್ನು ಮರೆಯಕೂಡದು.



ಇಚ್ಲಂಪಾಡಿ ಹಿರಿಯ ಬುನಾದಿ ಶಾಲೆ

## ಕುಳೂರು ಸರಕಾರಿ ಕಿರಿಯಪ್ರಾಥಮಿಕ ಶಾಲೆ ಪ್ರವೇಶೋತ್ಸವ



ಮಂಜೇಶ್ವರ: ಕುಳೂರು ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಪ್ರವೇಶೋತ್ಸವ ವನ್ನು ಚಂದ್ರಾವತಿ ವಿ.ವಿ. ಉದ್ಘಾಟಿಸಿದರು. ಬಳಿಕ ಶಾಲಾ ಹಳೆ ವಿದ್ಯಾರ್ಥಿ ಸಂಘದ ವತಿಯಿಂದ ನೀಡಿದ ಶಾಲಾ ವಾಹನದ ಉದ್ಘಾನೆಯನ್ನು ಕುಳೂರು ಕನ್ಯಾನದ ಲೀಲಾವತಿ ಪಿ. ಶೆಟ್ಟಿ ನೆರವೇರಿಸಿದರು. ಪ್ರೀ–ಪ್ರೈಮರಿ ತರಗತಿಯನ್ನು ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಮೊಹಮ್ಮದ್ ಕಂಚಿಲ ಉದ್ಘಾಟಿಸಿದರು. ರಕ್ಷಕ–ಶಿಕ್ಷಕ ಸಂಘದ ಅಧ್ಯಕ್ಷ ಪ್ರಮೋದ್ ಶೆಟ್ಟಿ ಶಾಲೆದಪಡ್ಪು ಅಧ್ಯಕ್ಷತೆ ವಹಿಸಿದರು. ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಮೊಹಮ್ಮದ್ ಕಂಚಿಲ, ಶಾಲಾಭಿವೃದ್ಧಿ ಸಮಿತಿಯ ಸದಸ್ಯ ಚಂದ್ರಹಾಸ ಶೆಟ್ಟಿ ಕುಳೂರು ಕನ್ಯಾನ, ಯುವ ಉದ್ಯಮಿ ಮೋಹನ್ ಶೆಟ್ಟಿ ಮಜ್ಜಾರ್, ಶಾಲಾ ಮಾತೃ ಸಂಘದ ಅಧ್ಯಕ್ಷೆ ಆಶಾಲತಾ ಕುಳೂರು ಉಪಸ್ಥಿತರಿದ್ದರು. ದಕ್ಷಿಣಕನ್ನಡ ಕಂಬಳ ಸಮಿತಿಗೆ ನೂತನವಾಗಿ ಆಯ್ಕೆಯಾದ ಪಿ.ಆರ್. ಶೆಟ್ಟಿ ಪೊಯ್ಯೆಲುರನ್ನು ಸನ್ಮಾನಿಸಲಾಯಿತು. ಶಾಲಾ ಮುಖ್ಯೋಪಾಧ್ಯಾಯ ಸತ್ಯನಾರಾಯಣ ಶರ್ಮ.ಪಿ ಸ್ವಾಗತಿಸಿ, ಶಿಕ್ಷಕಿ ಸೌಮ್ಯಾ.ಪಿ ವಂದಿಸಿದರು. ಎಸ್‌ಎಫ್‌ಐ ಮಂಜೇಶ್ವರ ಏರಿಯಾ ಸಮಿತಿ ವತಿಯಿಂದ ನೀಡಿದ ಕಲಿಕೋಪಕರಣಗಳನ್ನು ಬ್ಲೋಕ್ ಪಂ. ಸದಸ್ಯ ಕೆ.ಆರ್. ಜಯಾನಂದ ಶಾಲಾ ಮಕ್ಕಳಿಗೆ ವಿತರಿಸಿದರು.

# ಜಿಲ್ಲೆಯ ಶಾಲೆಗಳಲ್ಲಿ ಪುಟಾಣಿಗಳಿಗೆ ಸಂಭ್ರಮದ ಸ್ವಾಗತ



**ಕುಂಬಳೆ:** ಕುಂಬಳೆ ಸರಕಾರಿ ಸೀನಿಯರ್ ಬೇಸಿಕ್ ಸ್ಕೂಲ್‌ನಲ್ಲಿ ನಡೆದ ಪ್ರವೇಶೋತ್ಸವದಲ್ಲಿ ಪಿಟಿಎ ಅಧ್ಯಕ್ಷ ಕೊಗ್ಗು ಅಧ್ಯಕ್ಷತೆ ವಹಿಸಿದರು. ವಾರ್ಡ್ ಪ್ರತಿನಿಧಿ ರಮೇಶ್ ಭಟ್ ಉದ್ಘಾಟಿಸಿದರು. ಈ ವೇಳೆ ಪೂರ್ವ ವಿದ್ಯಾರ್ಥಿ ನಾಗೇಶ್‌ನನ್ನು ಅಭಿನಂದಿಸಲಾಯಿತು. ಕುಂಬಳೆ ರಾಮ್‌ದಾಸ್ ರಂಗಪ್ಪ ನ್ಯಾಕ್ ಟ್ರಸ್ಟ್ ವತಿಯಿಂದ ಕಲಿಕಾ ಕಿಟ್ ಟ್ರಸ್ಟ್ ಪ್ರತಿನಿಧಿ ರಘುವೀರ್ ನ್ಯಾಕ್ ವಿತರಿಸಿದರು. ಮುಖ್ಯೋಪಾಧ್ಯಾಯಿನಿ ಸರೋಜಿನಿ ಸ್ವಾಗತಿಸಿ, ಸ್ಟಾಫ್ ಕಾರ್ಯದರ್ಶಿ ಸಂತೋಷ್ ವಂದಿಸಿದರು.



*ಉಪ್ಪಳ: ಚೆರುಗೋಳಿ ಜಿಎಚ್‌ಡಬ್ಲ್ಯುಎಲ್‌ಪಿ ಶಾಲೆಯಲ್ಲಿ ನಡೆದ ಪ್ರವೇಶೋತ್ಸವ ವೇಳೆ ಮಂಗಲ್ಪಾಡಿ ಸೇವಾ ಸಹಕಾರಿ ಬ್ಯಾಂಕ್ ವತಿಯಿಂದ ವಿದ್ಯಾರ್ಥಿ ಗಳಿಗೆ ಕೊಡೆ ವಿತರಿಸಲಾಯಿತು. ರಾಜ್ಯ ಸಹಕಾರಿ ಇಲಾಖೆ ಮಂಜೇಶ್ವರ ವಿಭಾಗ ಇನ್‌ಸ್ಪೆಕ್ಟರ್ ಸತೀಶನ್ ಕೆ.ಸಿ., ಬ್ಯಾಂಕ್‌ನ ಉಪಾಧ್ಯಕ್ಷ ಪಿ.ಟಿ. ಸುಬ್ಬಣ್ಣ ಶೆಟ್ಟಿ, ಬ್ಯಾಂಕ್‌ನ ಕಾರ್ಯದರ್ಶಿ ಎಂ. ಭುಜಂಗ ಶೆಟ್ಟಿ, ಆಡಳಿತ ಮಂಡಳಿ ನಿರ್ದೇಶಕರು ಉಪಸ್ಥಿತರಿದ್ದರು.*



*ಮಂಜೇಶ್ವರ: ಪಾತೂರು ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ನಡೆದ ಶಾಲಾ ಪ್ರವೇಶೋತ್ಸವವನ್ನು ವರ್ಕಾಡಿ ಗ್ರಾಮ ಪಂ. ಅಧ್ಯಕ್ಷ ಅಬ್ದುಲ್ ಮಜೀದ್ ಬಿ.ಎ. ಉದ್ಘಾಟಿಸಿದರು. ಸ್ಥಳೀಯ ಗಣ್ಯರು, ಶಾಲಾ ಪಿಟಿಎ ಪದಾಧಿಕಾರಿಗಳು ಉಪಸ್ಥಿತರಿದ್ದರು.*



*ಮಂಗಲ್ಪಾಡಿ ಶಾಲೆ*



*ಕೋಳ್ಯೂರು ಶ್ರೀ ಶಂಕರನಾರಾಯಣ ಎಎಲ್‌ಪಿ ಶಾಲೆ.*

**ಪೆರ್ಲ:** ಕಜಂಪಾಡಿ ಜಿಡಬ್ಲ್ಯುಎಲ್‌ಪಿ ಶಾಲಾ ಪ್ರವೇಶೋತ್ಸವ ನಡೆಯಿತು. ಪಂ. ಅಧ್ಯಕ್ಷೆ ಹಾಗೂ ವಾರ್ಡ್ ಪ್ರತಿನಿಧಿ ರೂಪವಾಣಿ ಆರ್. ಭಟ್ ದೀಪ ಬೆಳಗಿಸಿ ಉದ್ಘಾಟಿಸಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ರಕ್ಷಕ–ಶಿಕ್ಷಕ ಸಂಘದ ಅಧ್ಯಕ್ಷ ಮಾಣಿ ಅಧ್ಯಕ್ಷತೆ ವಹಿಸಿದರು. ಬ್ಲೋಕ್ ಪಂ. ಸದಸ್ಯೆ ಸವಿತಾ ಬಾಳಿಕೆ ಪ್ರಿ–ಪ್ರೈಮರಿ ತರಗತಿಯನ್ನು ಉದ್ಘಾಟಿಸಿದರು. ಪುಟಾಣಿಗಳಿಗೆ ವಿವಿಧ ಸಂಘ ಸಂಸ್ಥೆಗಳು ನೀಡಿದ ಬ್ಯಾಗ್ ಬಳಪ ಇತ್ಯಾದಿ ಕಲಿಕೋಪಕರಣಗಳನ್ನು ಪಂ. ಅಧ್ಯಕ್ಷೆ ವಿತರಿಸಿದರು. ಶಾಲಾ ಮುಖ್ಯ ಶಿಕ್ಷಕ ಗಂಗಾಧರ ಶೆಟ್ಟಿ ಸ್ವಾಗತಿಸಿ, ಶಿಕ್ಷಕಿ ವಿಜಯ ವಂದಿಸಿದರು. ಮಾತೃಮಂಡಳಿ ಅಧ್ಯಕ್ಷೆ ಭುವನೇಶ್ವರಿ ಶಾಲಾ ಅಭಿವೃದ್ಧಿ ಸಮಿತಿ ಸದಸ್ಯರಾದ ದಯಾನಂದ ಕಜಂಪಾಡಿ, ಚಂದ್ರಶೇಖರ, ಸತ್ಯಶಂಕರ, ವಿದ್ಯಾರ್ಥಿಗಳು ಮತ್ತು ಪೋಷಕರು ಮೊದಲಾದವರು ಉಪಸ್ಥಿತರಿದ್ದರು

**ಕಾಸರಗೋಡು:** ಕೋಡಿಬೈಲು ನವೋದಯ ಅನುದಾನಿತ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರವೇಶೋತ್ಸವ ನಡೆಯಿತು. ಮಕ್ಕಳನ್ನು ವರ್ಣರಂಜಿತ ಮೆರವಣಿಗೆಯೊಂದಿಗೆ ಸ್ವಾಗತಿಸಲಾಯಿತು. ಪುಟಾಣಿಗಳ ಸಹಿತ ವಿದ್ಯಾರ್ಥಿಗಳು, ಅಧ್ಯಾಪಕರು, ರಕ್ಷಕರು ಸ್ಥಳೀಯರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ವಾರ್ಡ್ ಸದಸ್ಯೆ ಶಂಶಾದ್ ಬೀಗಂ, ಶಾಲಾ ಆಡಳಿತ ಮಂಡಳಿಯ ಸದಸ್ಯ ಮೋಹನದಾಸ್ ಕೊಂಡೆವೂರು, ರಕ್ಷಕ–ಶಿಕ್ಷಕ ಸಂಘದ ಅಧ್ಯಕ್ಷೆ ರಮ್ಲಾ, ಎಸ್‌ಎಸ್‌ಜಿ ಅಧ್ಯಕ್ಷೆ ಕುಸುಮ ಉಪಸ್ಥಿತರಿದ್ದರು.



ಕುಂಟಿಕಾನ



*ಎಯುಪಿ ಶಾಲೆ ಪಳ್ಳತ್ತಡ್ಕ*



*ಮಂಜೇಶ್ವರ: ಉದ್ಯಾವರ ಮಾಡ ಜಿಎಲ್‌ಪಿಎಸ್ ಶಾಲೆಯಲ್ಲಿ ಶಾಲಾ ಪ್ರವೇಶೋತ್ಸವ ಕಾರ್ಯಕ್ರಮದಲ್ಲಿ ಕಟ್ಟೆ ಫ್ರೆಂಡ್ಸ್ ಮಾಡ ಸಂಸ್ಥೆಯ ವತಿಯಿಂದ 1ನೇ ತರಗತಿಗೆ ಸೇರ್ಪಡೆಗೊಂಡ ವಿದ್ಯಾರ್ಥಿಗಳಿಗೆ ಕೊಡೆ ವಿತರಿಸಲಾಯಿತು. ಸಂಸ್ಥೆಯ ಪದಾಧಿಕಾರಿಗಳು, ಸದಸ್ಯರು ಉಪಸ್ಥಿತರಿದ್ದರು.*

**ಚೇವಾರು:** ಇಲ್ಲಿನ ಶಾರದಾ ಎಯುಪಿ ಶಾಲೆಯಲ್ಲಿ ನಡೆದ ಪ್ರವೇಶೋತ್ಸವವನ್ನು ನಿವೃತ್ತ ಮುಖ್ಯ ಶಿಕ್ಷಕ ಶ್ರೀಕೃಷ್ಣ ಭಟ್ ಬಾಯಾಡಿ ಉದ್ಘಾಟಿಸಿದರು. ರಕ್ಷಕ–ಶಿಕ್ಷಕ ಸಂಘದ ಅಧ್ಯಕ್ಷ ನೂರುದ್ದೀನ್ ಮುಬಾರಕ್ ಅಧ್ಯಕ್ಷತೆ ವಹಿಸಿದರು. ಸಂಘದ ಸದಸ್ಯರಾದ ನಾರಾಯಣ ಶುಭ ಹಾರೈಸಿದರು. ಮುಖ್ಯ ಶಿಕ್ಷಕ ಶ್ಯಾಮ್ ಭಟ್ ಸ್ವಾಗತಿಸಿದರು. ಶಾಲಾ ವ್ಯವಸ್ಥಾಪಕ ನಾರಾಯಣ ಭಟ್ ಬೀಡುಬೈಲ್ ನೀಡಿ ಬ್ಯಾಗ್‌ಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಲಾಯಿತು. ಚೇವಾರ್ ಜನರಲ್ ಸ್ಟೋರ್ ಮಾಲಿಕ ರೋಶನ್ ಕ್ರಾಸ್ತಾ, ರುಬಾನ್ ಕ್ರಾಸ್ತಾರ ವತಿಯಿಂದ ಸಿಹಿ ತಿಂಡಿ ವಿತರಿಸಲಾಯಿತು. ಸ್ಟಾಫ್ ಕಾರ್ಯದರ್ಶಿ ವಿಜಯನ್ ವಂದಿಸಿದರು. ವಿನೋದ್ ಚೇವಾರ್ ನಿರೂಪಿಸಿದರು.

**ಪೆರ್ಲ:** ಏತಡ್ಕ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಪ್ರವೇಶೋತ್ಸವದಲ್ಲಿ ಒಂದನೇ ತರಗತಿಗೆ ಸೇರಿದ ವಿದ್ಯಾರ್ಥಿಗಳನ್ನು ಮೆರವಣಿಗೆ ಮೂಲಕ ಬರಮಾಡಿಕೊಳ್ಳಲಾಯಿತು. ವಿದ್ಯಾರ್ಥಿಗಳಿಗೆ ಶಾಲೆಯ ವತಿಯಿಂದ ಬ್ಯಾಗ್, ಗುರುತು ಚೀಟಿ ವಿತರಿಸಲಾಯಿತು. ಸಭಾ ಕಾರ್ಯಕ್ರಮವನ್ನು ವಾರ್ಡ್ ಸದಸ್ಯೆ ಶೈಲಜಾ ನಡುಮನೆ ಉದ್ಘಾಟಿಸಿ ಶುಭ ಕೋರಿದರು. ರಕ್ಷಕ– ಶಿಕ್ಷಕ ಸಂಘದ ಅಧ್ಯಕ್ಷ ಸಂತೋಷ್ ಕುಮಾರ್ ಪುತ್ರಕಳ ಅಧ್ಯಕ್ಷತೆ ವಹಿಸಿದರು. ಮಾತೃಮಂಡಳಿ ಅಧ್ಯಕ್ಷೆ ಸೌಮ್ಯ ನೆಲ್ಲಿಮೂಲೆ, ಎಸ್‌ಎಸ್‌ಜಿ ಅಧ್ಯಕ್ಷ ವೈ ಗಂಗಾಧರ ಮೂಲ್ಯ, ವಾರ್ಡ್ ಸದಸ್ಯೆ ಎಲಿಜಬೆತ್ ಕ್ರಾಸ್ತ ಶುಭ ಹಾರೈಸಿದರು. ವಿದ್ಯಾರ್ಥಿ ವೇತನ ಲಭಿಸಿದ ವಿದ್ಯಾರ್ಥಿಗಳಿಗೆ ಶಾಲಾ ವ್ಯವಸ್ಥಾಪಕ ಶ್ರೀಧರ ಭಟ್ ಫಲಕ ನೀಡಿ ಗೌರವಿಸಿದರು.

**ಮೀಯಪದವು:** ಇಲ್ಲಿನ ಶ್ರೀ ವಿದ್ಯಾವರ್ಧಕ ಹೈಯರ್ ಸೆಕೆಂಡರಿ ಶಾಲೆ ಪ್ರವೇಶೋತ್ಸವ ಶಾಲಾ ಪ್ರಬಂಧಕಿ ಪ್ರೇಮಾ ಕೆ. ಭಟ್ ಅಧ್ಯಕ್ಷತೆಯಲ್ಲಿ ಜರಗಿತು. ಎಸ್.ಆರ್.ಜಿ ಕನ್ವೀನರ್ ಇಬ್ರಾಹಿಂ ಹೊನ್ನಕಟ್ಟೆ, ಪಿಟಿಎ ಅಧ್ಯಕ್ಷ ಟಿ.ಡಿ. ಸದಾಶಿವ ರಾವ್, ಎಂಪಿಟಿಎ ಅಧ್ಯಕ್ಷೆ ಪ್ರೇಮಲತಾ ಉಪಸ್ಥಿತರಿದ್ದರು. ಮುಖ್ಯೋಪಾಧ್ಯಾಯ ಗೋಪಾಲಕೃಷ್ಣ ಭಟ್ ಸ್ವಾಗತಿಸಿ, ಮೃದುಲಾ ಟೀಚರ್ ವಂದಿಸಿದರು.



ಪೆರ್ಲ ಶ್ರೀ ಸತ್ಯನಾರಾಯಣ ಪ್ರೌಢಶಾಲೆ



ಪೆರಡಾಲ ನವಜೀವನ ಶಾಲೆ



*ಕಾಸರಗೋಡು: ಕೋಡಿಬೈಲು ನವೋದಯ ಅನುದಾನಿತ ಕಿರಿಯ ಪ್ರಾಥಮಿಕ ಶಾಲೆ*



*ತೊಟ್ಟೆತ್ತೋಡಿ ವಾಣಿವಿಲಾಸ ಹಿರಿಯ ಪ್ರಾಥಮಿಕ ಮೀಯಪದವು:*



*ಪೆರ್ಲ: ಕಜಂಪಾಡಿ ಜಿಡಬ್ಲ್ಯುಎಲ್‌ಪಿ ಶಾಲೆ*



*ಚೇವಾರು ಶಾರದಾ ಎಯುಪಿ ಶಾಲೆ*

**ಪೆರ್ಲ:** ನಲ್ಕ ವಾಗ್ದೇವಿ ಕಿರಿಯ ಪ್ರಾಥಮಿಕ ಶಾಲಾ ಪ್ರವೇಶೋತ್ಸವ ಶಾಲಾ ರಕ್ಷಕ–ಶಿಕ್ಷಕ ಸಂಘದ ಅಧ್ಯಕ್ಷ ಕೃಷ್ಣ ನಾಯ್ಕ ಕಲಿಕೋಪಕರಣ ವಿತರಿಸಿ ಉದ್ಘಾಟಿಸಿದರು. ಲಕ್ಷ್ಮೀಪ್ರಿಯ ಸರಳಾಯ ಮುಖ್ಯ ಅತಿಥಿಯಾಗಿದ್ದರು. ಮಾತೃ ರಕ್ಷಕ ಸಂಘದ ಅಧ್ಯಕ್ಷೆ ವಿನೋದ, ಸಮಾಜಸೇವಕ ಅಬ್ಬಾಸ್ ನಲ್ಕ ಶುಭ ಹಾರೈಸಿದರು. ಮುಖ್ಯ ಶಿಕ್ಷಕ ಶ್ರೀಪತಿ.ಎಸ್ ಸ್ವಾಗತಿಸಿದರು. ಶಿಕ್ಷಕಿ ಪಾರ್ವತಿ ಕೈಲಾಸ ಪ್ರವೇಶೋತ್ಸವ ಗೀತೆ ಹಾಡಿದರು. ನಳಿನಿ ಎಸ್. ವಂದಿಸಿ, ಶಿಕ್ಷಕಿ ಉಷಾ ದೇವಿ.ಎನ್. ನಿರೂಪಿಸಿದರು.

**ಪುತ್ತಿಗೆ:** ಪುತ್ತಿಗೆ ಪಂ. ಮಟ್ಟದ ಶಾಲಾ ಪ್ರವೇಶೋತ್ಸವ ಪುತ್ತಿಗೆ ಅನುದಾನಿತ ಕಿರಿಯಪ್ರಾಥಮಿಕ ಶಾಲೆಯಲ್ಲಿ ಜರಗಿತು. ಪಂ. ಅಧ್ಯಕ್ಷೆ ಅರುಣಾ ಜೆ. ಪ್ರವೇಶೋತ್ಸವ ಉದ್ಘಾಟಿಸಿದರು. ರಕ್ಷಕ–ಶಿಕ್ಷಕ ಸಂಘದ ಅಧ್ಯಕ್ಷ ಅಬೂಬಕ್ಕರ್ ಊಜಂಪಾಡಿ ಅಧ್ಯಕ್ಷತೆ ವಹಿಸಿದರು. ಶಾಲಾ ವ್ಯವಸ್ಥಾಪಕ ಅಶೋಕನ್ ನಂಬ್ಯಾರ್, ಎಸ್‌ಎಸ್‌ಜಿ ಅಧ್ಯಕ್ಷ ವೇಣುಗೋಪಾಲ್ ಶುಭಾಶಂಸನೆಗೈದರು. ಪ್ರೊಫೆಷನಲ್ ಕಾಲೇಜು ನಿರ್ದೇಶಕ ಶ್ರೀಕುಮಾರ್ ಪಳ್ಳಿಮತ್ ವಿದ್ಯಾರ್ಥಿಗಳಿಗೆ ಕಲಿಕೋಪಕರಣ ವಿತರಿಸಿದರು. ಅಧ್ಯಾಪಕ ಬಾಬುರಾಜ್ ನಿರೂಪಿಸಿ, ಶಿಕ್ಷಕಿಯರಾದ ಸಿಂಧು ಸ್ವಾಗತಿಸಿ, ಸುಮನ ವಂದಿಸಿದರು.

**ಮಂಜೇಶ್ವರ:** ನಾವು ದಾರಿ ತೋರಿಸುವ, ಅವರು ಕಲಿಯಲಿ ಎಂಬ ಘೋಷಣೆಯೊಂದಿಗೆ ಎಸ್‌ಎಫ್‌ಐ ಮಂಜೇಶ್ವರ ಏರಿಯಾ ಸಮಿತಿ ನೇತೃತ್ವದಲ್ಲಿ ಕುಳೂರು ಶಾಲೆ ಸಂರಕ್ಷಣೆಗೆ ಚಾಲನೆ ನೀಡಲಾಯಿತು. ವಿದ್ಯಾರ್ಥಿಗಳಿಗೆ ಕಲಿಕೋಪಕರಣ ವಿತರಣೆ ಮತ್ತು ಏರಿಯಾ ಮಟ್ಟದ ಪ್ರವೇಶೋತ್ಸವವನ್ನು ಬ್ಲೋಕ್ ಪಂ. ಸದಸ್ಯ ಕೆ.ಆರ್. ಜಯಾನಂದ ಉದ್ಘಾಟಿಸಿದರು. ನಿಖಿಲ್.ಎನ್ ಅಧ್ಯಕ್ಷತೆ ವಹಿಸಿದ್ದರು. ಎಸ್‌ಎಫ್‌ಐ ಜಿಲ್ಲಾ ಸಮಿತಿ ಸದಸ್ಯ ಮೊಹಮ್ಮದ್ ಅನೀಸ್, ಡಿವೈಎಫ್‌ಐ ಬ್ಲೋಕ್ ಕಾರ್ಯದರ್ಶಿ ಸಾದಿಕ್ ಚೆರುಗೋಳಿ, ಮುಖ್ಯೋಪಾಧ್ಯಾಯ ಸತ್ಯನಾರಾಯಣ ಶರ್ಮ, ಪಿಟಿಎ ಅಧ್ಯಕ್ಷ ಪ್ರಮೋದ್ ಶೆಟ್ಟಿ, ವಾರ್ಡ್ ಸದಸ್ಯೆ ಚಂದ್ರಾವತಿ ಮೊದಲಾದವರು ಮಾತನಾಡಿದರು. ಏರಿಯಾ ಕಾರ್ಯದರ್ಶಿ ವಿನಯ್ ಕುಮಾರ್ ಸ್ವಾಗತಿಸಿ, ಅಜಯ್ ಸೇತು ವಂದಿಸಿದರು.

**ಉಪ್ಪಳ:** ಮುಡೂರುತೋಕೆ ವರ್ಕಾಡಿ ಶ್ರೀ ಸುಬ್ರಹ್ಮಣ ಎಎಲ್‌ಪಿ ಶಾಲೆಯಲ್ಲಿ ನಡೆದ ಪ್ರವೇಶೋತ್ಸವ ಪಿಟಿಎ ಅಧ್ಯಕ್ಷ ಶಿವರಾಜ್ ಉದ್ಘಾಟಿಸಿದರು. ಶಾಲಾ ಪ್ರಬಂಧಕ ದೇವಪ್ಪ ಶೆಟ್ಟಿ ಅಧ್ಯಕ್ಷತೆ ವಹಿಸಿದರು. ಶಾಲಾ ಮುಖ್ಯ ಶಿಕ್ಷಕಿ ಚಂದ್ರಾವತಿ ಸ್ವಾಗತಿಸಿದರು. ಶಿಕ್ಷಕಿಯರಾದ ಚಿತ್ರಾ ನಿರೂಪಿಸಿ,ಶಶಿಕಲಾ ವಂದಿಸಿದರು.



*ಪೆರ್ಲ: ಏತಡ್ಕ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ.*



*ನಲ್ಕ ವಾಗ್ದೇವಿ ಕಿರಿಯಪ್ರಾಥಮಿಕ ಶಾಲೆ*



*ಕುಳೂರು ಶಾಲೆ*

**ಕುಂಬಳೆ:** ಇಚ್ಲಂಪಾಡಿ ಹಿರಿಯ ಬುನಾದಿ ಶಾಲೆಯಲ್ಲಿ ಕುಂಬಳೆ ಪಂಚಾಯತ್ ಮಟ್ಟದ ಶಾಲಾ ಪ್ರವೇಶೋತ್ಸವ ಸ್ವಾಗತ ಗೊಂಬೆಗಳೊಂದಿಗೆ ಶಾಲಾ ವಿದ್ಯಾರ್ಥಿಗಳ ಮೆರವಣಿಗೆಯ ಮೂಲಕ ನವಾಗತರನ್ನು ಸ್ವಾಗತಿಸಲಾಯಿತು. ಶಾಲಾ ವ್ಯವಸ್ಥಾಪಕ ಎಂ. ಗಣೇಶ್ ರಾವ್ ಧ್ವಜಾರೋಹಣಗೈದರು. ಶಾಲಾ ರಕ್ಷಕ/ಶಿಕ್ಷಕ ಸಂಘದ ಅಧ್ಯಕ್ಷ ಕೃಷ್ಣ ಕಳತ್ತೂರು ಅಧ್ಯಕ್ಷತೆ ವಹಿಸಿದರು. ಪಂ. ಅಧ್ಯಕ್ಷ ಕೆ.ಎಲ್.ಪುಂಡರೀಕಾಕ್ಷ ದೀಪ ಬೆಳಗಿಸಿ ಉದ್ಘಾಟಿಸಿದರು. ಅಧ್ಯಾಪಿಕೆಯರು ಪ್ರವೇಶೋತ್ಸವ ಗೀತೆ ಹಾಡಿದರು. ಬಿ.ಆರ್.ಸಿ ತರಬೇತುದಾರ ಕೇಶವ ನಂಬೂದಿರಿ ಕಲಿಕೋಪಕರಣಗಳನ್ನು ವಿತರಿಸಿದರು. ನೂತನವಾಗಿ ತಯಾರಿಸಿದ ಶಾಲಾ ಭಾವಚಿತ್ರದ ಮುಖಪುಟವಿರುವ ನೋಟುಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು. ಪಂಚಾಯತ್ ಸದಸ್ಯರಾದ ಸುಕೇಶ್ ಭಂಡಾರಿ, ನಿವೃತ್ತ ಮುಖ್ಯ ಶಿಕ್ಷಕ ಪಿ. ನರಹರಿ, ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಎಚ್. ಶಿವರಾಮ ಭಟ್, ಮಾತೃಸಂಘದ ಅಧ್ಯಕ್ಷೆ ಶ್ರೀಲತಾ ಹಳೆಮನೆ ಶುಭಹಾರೈಸಿದರು. ಮುಖ್ಯೋಪಾಧ್ಯಾಯ ರಾಧಾಕೃಷ್ಣ ತುಂಗ ಕೆ.ಎಸ್. ಸ್ವಾಗತಿಸಿ, ಶಿಕ್ಷಕಿ ಸುಲೇಖಾ ಸಿ.ಆರ್. ವಂದಿಸಿದರು. ಶಿಕ್ಷಕ ಬಾಲಕೃಷ್ಣ ಆಚಾರಿ ಪಿ. ಸ್ವಾಗತ ಗೀತೆ ಹಾಡಿ ದರು. ಎಸ್.ಆರ್.ಜಿ. ಸಂಚಾಲಕ ಉಮೇಶ್ ಜಿ.ಎನ್. ನಿರೂಪಿಸಿದರು.

**ವರ್ಕಾಡಿ:** ವರ್ಕಾಡಿ ಬಳಿಯ ಮುಡೂರು ತೋಕೆ ಶ್ರೀ ಸುಬ್ರಹ್ಮಣ್ಯ ಎಎಲ್‌ಪಿ ಶಾಲೆಯಲ್ಲಿ ಪ್ರವೇಶೋತ್ಸವ ದಿನದಂದು ವಿದ್ಯಾರ್ಥಿಗಳಿಗೆ ಜಯಪ್ರಕಾಶ್ ತೌಡುಗೋಳಿ ವತಿಯಿಂದ ಪುಸ್ತಕ, ಮನೋಜ್ ನೀರೋಳಿಕೆ ಅವರಿಂದ ಕೊಡೆ, ಕೇರಳ ಗ್ರಾಮೀಣ ಬ್ಯಾಂಕ್ ಪಾವೂರು ಶಾಖೆ ನೇತೃತ್ವದಲ್ಲಿ ಬ್ಯಾಗ್ ವಿತರಿಸಲಾಯಿತು.



*ಮುಡೂರುತೋಕೆ ವರ್ಕಾಡಿ ಶ್ರೀ ಸುಬ್ರಹ್ಮಣ್ಯ ಎಎಲ್‌ಪಿ ಶಾಲೆ*



*ವಿದ್ಯಾವರ್ಧಕ ಎಯುಪಿ ಶಾಲೆ ಮೀಯಪದವು*



*ಚಿಪ್ಪಾರು ಹಿಂದೂ ಎಯುಪಿ ಶಾಲೆ*